ದೃಶ್ಯ! ಇಬ್ಬರೂ ಕೈಕೈ ಹಿಡಿದು ನಡೆದು ಡ್ರಾಯಿಂಗ್ ರೂಮಿನ ಮಧ್ಯಕ್ಕೆ ಬಂದರು. ಶ್ರೀಮತಿ ದಾಶಗುಪ್ತೊ ಅವಸರಪಡಿಸಿದರು, “ಬೇಗಬೇಗ ಬಾ. ಕೇಕ್ ಕಟ್ ಮಾಡು. ನೋಡು ಎಷ್ಟೊತ್ತಿನಿಂದ ಎಲ್ಲರೂ ನಿನಗೋಸ್ಕರ ಕಾಯ್ತಾ ಇದಾರೆ!”

ಆ ಮಕ್ಕಳಿಗೇನೂ ಇದು ಅರ್ಥವಾದಂತೆ ಕಾಣಲಿಲ್ಲ. ಅವರಿಬ್ಬರೂ ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ತಾ ತಮ್ಮದೇ ಜಗತ್ತಲ್ಲಿದ್ದರು.

ಪ್ರೀತಿಯ ಸೋದರತ್ತೆ ಮತ್ತೆ ಫರ್ಝಾನ್ನಾಗೆ ಕೇಳಿದರು, “ನೀವು ಗಲಾಟೆ ಆಗ್ತಾ ಇದೆ ಅಂತ ಬರಬಾರದು ಅಂದುಕೊಂಡಿದ್ದಿರಿ ಅಲ್ವಾ?”

ಫರ್ಝಾನ್ನಾ ಹೇಗೆ ಪ್ರತಿಕ್ರಿಯಿಸಬೇಕೆಂದು ಯೋಚನೆ ಮಾಡ್ತಾ ಇದ್ದಳು. ಅಷ್ಟರಲ್ಲಿ ಚಪ್ಪಾಳೆ ಸದ್ದು ಕೇಳಿಸಿತು. ಇಬ್ಬರೂ ತಿರುಗಿ ನೋಡಿದರು. ಪ್ರೀತಿ ಕೇಕ್ ಕತ್ತರಿಸ್ತಾ ಇದ್ದಳು. ಪಕ್ಕದಲ್ಲಿ ಫರೀನ್. ಎರಡು ಮೂರು ಕ್ಯಾಮರಾಗಳ ಫ್ಲಾಷ್ ಲೈಟ್ ಒಂದೇ ಸಲ ಕ್ಲಿಕ್ ಆದವು. ಎಲ್ಲರೂ “ಹ್ಯಾಪಿ ಬರ್ತಡೇ ಟೂ ಯು” ಅಂತ ಹಾಡುತ್ತಿದ್ದರು. ಶ್ರೀಮತಿ ದಾಶಗುಪ್ತೊ ಪ್ರೀತಿ ಕೇಕ್ ಕತ್ತರಿಸಲು ಸಹಾಯ ಮಾಡುತ್ತಿದ್ದರು. ಕೇಕ್‌ನ ಒಂದು ಚೂರು ಫರೀನ್ ಬಾಯಲ್ಲಿಟ್ಟಳು ಪ್ರೀತಿ, ಅವಳ ಬಾಯಲ್ಲಿ ಫರೀನ್ ಇಟ್ಟ ಕೇಕು. ಇಬ್ಬರ ಮುಖದಲ್ಲೂ ಎಂಥ ನಿಷ್ಕಲ್ಮಶ ನಗು!

ಪ್ರೀತಿಯ ಸೋದರತ್ತೆ ಫರ್ಝಾನ್ನಾಳತ್ತ ಬಾಗಿ ಹೇಳಿದರು, “ಈ ಮಕ್ಕಳು ನಾವು ದೊಡ್ಡೋರು ಲಜ್ಜೆಯಿಂದ ತಲೆತಗ್ಗಿಸೋ ಹಾಗೆ ಮಾಡಿಬಿಟ್ಟರು”.

## ಜಹನಾರಾ ಸಿದ್ದಿಕಿ (1957)

ಬಾಂಗ್ಲಾ ದೇಶದ ರಾಜಾಶಾಹಿಯಲ್ಲಿ ಜನಿಸಿದರು. ‘ಪ್ರದೋಷ್ಕಾಲ್’, ‘ಮೇಫೇರ್ ಶೇಷ್ ರಂಗ್’, ‘ವೈದಅವೈದೊ’ ಅವರ ಪ್ರಮುಖ ಕೃತಿಗಳು. ಜಹನಾರಾ ಅವರದು ಮಕ್ಕಳ ಸಾಹಿತ್ಯದಲ್ಲಿ ಕೂಡ ದೊಡ್ಡ ಹೆಸರು. ಅವರ ಸಾಹಿತ್ಯ ಕೃತಿಗಳಲ್ಲಿ ಮಕ್ಕಳು ಮುಖ್ಯ ಭೂಮಿಕೆಯಲ್ಲಿರುತ್ತಾರೆ. ಪ್ರಸ್ತುತ ಬಾಂಗ್ಲಾ ದೇಶದಲ್ಲಿ ನೆಲೆಸಿದ್ದಾರೆ.

## ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

## ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ, ಬಂಗಾಳಿ, ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.